ಪದ್ಯಪಲ್ಲವ





## ಕುವೆಂಪು

ಕಲೆ: ಸೃಜನ್

# ರೈಲ್ ರಸ್ತೆ



ಬೇಸಗೆಯ ಬಿಸಿಲು ಸುಡುತಿಹುದು ಸುಡುಸುಡನೆ;
ಮೂರ್ಛೆ ಹೋಗಿದೆ ಭೂಮಿ ನಡುಗಿ ನಡನಡನೆ!
ಹರಿಯುತಿದೆ ಬಯಲಿನಲಿ ಕಂಬಿ ದಾರಿ
ಕರ್ಕಶದ ಕಟುನೀಲಿ ಕಾಂತಿಯನು ಕಣ್ಗೆ ಕಾರಿ;
ದೂರ, ಸಮದೂರವಾಗಿ,
ದಿಙ್ಮೂಲೆಯಿಂ ಬಂದು ದಿಙ್ಮೂಲೆಗಾಗಿ
ವೇಗದಿಂದೋಡುತಿರುವೆರಡು ಕಾಳಾಹಿಗಳ ಹೋಲಿ;
ನೂತ್ನ ನಾಗರಿಕತೆಯ ಯಂತ್ರಾಸ್ಥಿಪಂಜರದಿ
ಕಬ್ಬಿಣದ ಹೃದಯಕ್ಕೆ ಹೊತ್ತು ರಕ್ತವ ಭರದಿ
ಪ್ರವಹಿಸುವ ಲೌಹ ರೇಖಾ ನಾಳಗಳ ಹೋಲಿ;
ಕರ್ಕಶದ ಕಟುನೀಲ ಕಾಂತಿಯನು ಕಣ್ಗೆ ಕಾರಿ
ಹರಿಯುತಿದೆ ಕಂಬಿದಾರಿ!

ಬಡಕಲಾಗಿಹ ಹಸುವು ಬರಿಬಯಲ ಮೇಯುತಿದೆ;
ತನ್ನ ನೆಳಲೂ ತನಗೆ ಕಾವಾಗಿ ಸಾಯುತಿದೆ!
ಎಲೆಯಿಲ್ಲದಾ ಮರವೊ ಮಳೆಯ ಹಾರೈಸುತಿದೆ;
ಅದರ ನೆಳಲೆಲುಬುಗೂಡನೆ ಬಿಸಿಲು ದಹಿಸುತಿದೆ!
ಶಬ್ದ ನಿಶ್ಶಬ್ದವಾಗಿದೆ ಮಹಾ ಶೂನ್ಯತೆಯ ಶವದಂತೆ,
ವೈಶಾಖರುದ್ರನ ಸಮಾಧಿಯಂತೆ!
ಯಾವುದನು ಲೆಕ್ಕಿಸದೆ ಕಂಬಿದಾರಿ
ಬಿಸಿಲ ಝಳದಲಿ ಇನಿತು ಕಂಪನವ ತೋರಿ,
ಕರ್ಕಶದ ಕಟುನೀಲ ಕಾಂತಿಯನು ಕಣ್ಗೆ ಕಾರಿ,
ಹರಿಯುತಿದೆ ರೈಲು ದಾರಿ!

ನೋಡುತಿಹುದಿದ್ದಕಿದ್ದಂತೆ ಹಸು ಕೊರಳನೆತ್ತಿ;
ತನ್ನ ಸದ್ದನೆ ತಾನು ಬಿಡದೆ ಬೆಂಬತ್ತಿ
ಬಂದಿತದೊ ನಾಗರಿಕತೆಯ ಮಾರಿ ಬೋರೆ ಹತ್ತಿ!
ರೈಲು ಬಂದಿತು, ರೈಲು!
ಜಾಗರಿತವಾಗುತಿದೆ ಪ್ರಜ್ಞೆಯಿಲ್ಲದ ಬೈಲು!

